2) ಯಾವುದೇ ಉದ್ದಿಮೆಯು ಪ್ರಗತಿ ಹೊಂದಲು ಹಲವಾರು ಮಾರ್ಗಗಳಿವೆ. ಸಿಎಂಡಿಯವರೊಬ್ಬರಿಂದಲೇ ಸಾಧ್ಯವಾಗುವುದಿಲ್ಲ. ಪಿ.ಎಸ್.ಆರ್.ಸಿ. ಯವರು ಈಗಾಗಲೇ ಕೆಲವು ಮಾರ್ಗಸೂಚಿಗಳನ್ನು ಹೊರಡಿಸಿರುತ್ತಾರೆ.

3) ಸರ್ಕಾರದಿಂದ ನಿಗಮಕ್ಕೆ ಇಂತಹ ಸೂಚನೆಯನ್ನು ನೀಡಿರುವುದಿಲ್ಲ. ಎನ್‌ಜಿಇಎಫ್ ನಿಗಮವು ಬಳಕೆದಾರರಿಂದ ಸ್ವೀಕರಿಸಲಾದ ಯಾವುದೇ ಆದೇಶಗಳನ್ನು ತಿರಸ್ಕರಿಸಿರುವುದಿಲ್ಲ. ಎನ್‌ಜಿಇಎಫ್ ನಿಗಮವು ಬಳಕೆದಾರರಿಂದ ಬರುವ ಆದೇಶಗಳನ್ನು ವಿತರಣೆ ಮಾಡಲು ಕಾಯ್ದಿರಿಸಿದೆ. ಹಾಲಿ ಆರ್ಥಿಕ ವರ್ಷದ ಅಂದರೆ ಜನವರಿ 2001ರವರೆಗೆ ಈಗಾಗಲೇ ಬಂದಿರುವ ಹಣ ರೂ. 80.7 ಕೋಟಿಗಳಷ್ಟು ಆರ್ಡರ್‌ಗಳನ್ನು ಸ್ವೀಕರಿಸಲಾಗಿದೆ.

4) ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ನಿಗಮವು ನಷ್ಟದಲ್ಲಿರುವುದರಿಂದ ಸ್ವಯಂ ನಿವೃತ್ತಿ ಯೋಜನೆಗೆಂದು ಯಾವುದೇ ಪ್ರತ್ಯೇಕ ನಿಧಿಯನ್ನು ಹೂಡಿರುವುದಿಲ್ಲ.

ಹಾಸನ ಜಿಲ್ಲೆಯ ಪೊಲೀಸ್ ಠಾಣೆಗಳ ಮಾಹಿತಿ:

109 (47) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಹಾಸನ ಜಿಲ್ಲೆಯಲ್ಲಿ ಎಷ್ಟು ಪೊಲೀಸ್ ಠಾಣೆಗಳಿವೆ;

2) ಹಾಸನ ಜಿಲ್ಲೆಯ ಪೊಲೀಸ್ ಠಾಣೆಗಳಲ್ಲಿ ಸಿಬ್ಬಂದಿಯ ಕೊರತೆ ಇರುವುದನ್ನು ಸರ್ಕಾರ ಮನಗಂಡಿದೆಯೇ;

3) ಹಾಗಿದ್ದಲ್ಲಿ, ಹಾಸನ ಜಿಲ್ಲೆಯಲ್ಲಿನ ಪೊಲೀಸ್ ಠಾಣೆಗಳ ಸಿಬ್ಬಂದಿ ಕೊರತೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

1) ಹಾಸನ ಜಿಲ್ಲೆಯಲ್ಲಿ ಒಟ್ಟು 26 ಪೊಲೀಸ್ ಠಾಣೆಗಳಿವೆ.

2) ಸಿಬ್ಬಂದಿ ಕೊರತೆ ಇರುವುದಿಲ್ಲ.

3) ಉದ್ಭವಿಸುವುದಿಲ್ಲ.

ಹಾಸನ ಜಿಲ್ಲೆಯಲ್ಲಿ ಹೊಸದಾಗಿ ಪೊಲೀಸ್ ಠಾಣೆ ತೆರೆಯುವುದು:

110 (48) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯದಲ್ಲಿ ನೂತನವಾಗಿ ತೆರೆಯಲು ಉದ್ದೇಶಿಸಿರುವ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು; ಎಲ್ಲೆಲ್ಲಿ ತೆರೆಯಲು ಉದ್ದೇಶಿಸಲಾಗಿದೆ;